# ಯೇಸುವಿನ ಪುನರುತ್ಥಾನ ಹೊಂದಿದ ದೇಹ

ಪುನರುತ್ಥಾನವನ್ನು ಅನೇಕ ರಹಸ್ಯಗಳು ಸುತ್ತುವರೆದಿರುತ್ತವೆ. ಯೇಸುವಿನ ಪುನರುತ್ಥಾನ ಹೊಂದಿದ ದೇಹವೇ ಒಂದು ಚಿಕ್ಕ ರಹಸ್ಯವಾಗಿದೆ.

ಅದು *ಒಂದು ದೇಹ* ಎಂಬುದನ್ನು ಮೊದಲಿಗೆ ನಾವು ಮನದಟ್ಟು ಮಾಡಿಕೊಳ್ಳಬೇಕು. ಪುನರುತ್ಥಾನವು ಒಂದು ಊಹೆ ಅಥವಾ ಕಟ್ಟುಕಥೆಯಾಗಿರುವದಿಲ್ಲ ಎಂಬುದನ್ನು ಅರಿಯ ಬೇಕೆಂದು ಅಪೊಸ್ತಲರು ಬಯಸಿದ್ದಾರೆ. ಅದನ್ನು ಅವರು ದರ್ಶನ ಅಥವಾ ಕನಸಿನಲ್ಲಿ ಕಂಡಿರುವದಿಲ್ಲ. ಅವರು ಭೂತವನ್ನಾಗಲೀ, ಅಥವಾ ಆತ್ಮವನ್ನಾಗಲ್ಲೇ ಕಂಡಿರುವದಿಲ್ಲ. ಪುನರುತ್ಥಾನದ ನಂತರ, ದೈಹೀಕ ಕಣ್ಣುಗಳಿಂದ ನೋಡಬಹುದಾದ ದೇಹವನ್ನು ಯೇಸು ಹೊಂದಿದ್ದನು (ಯೋಹಾನ 20:14, 20; ಅಪೊಸ್ತಲರ ಕೃತ್ಯಗಳು 10:40). ಆತನ ದೇಹ "ಮಾಂಸ ಮತ್ತು ಎಲಬನ್ನು" ಹೊಂದಿತ್ತು (ಲೂಕ 24:39). ಭೂಮಿಯ ಮೇಲೆ ನಡೆದಾಡಿದ ದೇಹವನ್ನು ಆತನು ಹೊಂದಿದ್ದನು (ಲೂಕ 24:15) ಮತ್ತು ಅದನ್ನು ಒಬ್ಬನು ಮುಟ್ಟಬಹುದಿತ್ತು (ಮತ್ತಾಯ 28:9; ಲೂಕ 24:39). ಆತನು ಮಾತನಾಡುವ ದೇಹವನ್ನು ಹೊಂದಿದ್ದನು (ಲೂಕ 24:17) ಮತ್ತು ಊಟ ಮಾಡಿದನು (ಲೂಕ 24:41-43; ಅಪೊಸ್ತಲರ ಕೃತ್ಯಗಳು 10:41). ಶಿಲುಬೆಯಲ್ಲಿ ಹೊಂದಿದ ಗಾಯಗಳ ಗುರುತನ್ನು ಹೊಂದಿದ್ದ ದೇಹವು ಅದಾಗಿತ್ತು (ಯೋಹಾನ 20:20, 25, 27).

ಅದಾಗ್ಯೂ ಆ ಸಮಯದಲ್ಲಿ, *ಅದು ಅಸಹಜವಾದ* ದೇಹವಾಗಿತ್ತು, ಶಿಷ್ಯರೆಲ್ಲರೂ ಬಾಗಿಲು ಮುಚ್ಚಿದ ಕೊಠಡಿಯಲ್ಲಿದ್ದಾಗ, ಯೇಸು "ಅವರ ನಡುವೆ" ಪ್ರತ್ಯಕ್ಷನಾದನು (ಯೋಹಾನ 20:19, 26). ಯಾಕಂದರೆ ಆತನು ಗಟ್ಟಿಯಾದ ಮರದ ನಡುವೆ ಹಾದೂ ಬಂದಿದ್ದನು.[1] ಇದರ ಕುರಿತು ಹೋಮರ್ ಹೈಲೇರವರು ಈ ಕೆಳಕಂಡಂತೆ ಬರೆದಿರುವರು,

> *ಮಚ್ಚು* ಎಂಬುದು [ಯೋಹಾನ 20:19, 26] *kleio,* ಪದದ ಮೂಲ ಮಚ್ಚು ಭದ್ರಪಡಿಸಿ ಸರಳಿಗಳಿಂದ ಬಿಗಿಗೊಳಿಸು (Arndt and Gingrich[2]). ಈ ವಿಧವಾಗಿ ಆ ಕೊಠಡಿಯನ್ನು ತೆಗೆಯಲಾರದಂತೆ ಭದ್ರಪಡಿಸಿದ್ದರು ಎಂದು ಹೊಸ ಒಡಂಬಡಿಕೆ ತಿಳಿಸುತ್ತದೆ (ನೋಡಿ ಮತ್ತಾಯ 25:10; ಲೂಕ 11:7; ಅಪೊಸ್ತಲರ ಕೃತ್ಯಗಳು 21:30; ಪ್ರಕಟನೆ 3:7, 8; 20:3; 21:25). ಅಂಥಹ ಸಮಯದಲ್ಲಿ ಯೇಸು ಬಾಗಿಲನ್ನು ತೆರೆದು ಒಳಬರದೆ, ಇದಕ್ಕಿದ್ದ ಹಾಗೆ ಅವರ ನಡುವೆ ಪ್ರತ್ಯಕ್ಷನಾದನು.[3]

ಕ್ಲೋಲೆಯೋಫನು ಹಾಗೂ ಅವನ ಸ್ನೇಹಿತರು ಯೇಸುವೆಂದು ಗ್ರಹಿಸುವದರೊಳಗಾಗಿ, "ಆತನು ಅವರ ಕಣ್ಣಿಗೆ ಮಾಯವಾದನು" (ಲೂಕ 24:31). John F. Carter ರವರ ಪ್ರಕಾರ, "ಯೇಸು ಪುನರುತ್ಥಾನ ಹೊಂದಿದ ನಂತರ, ಆತನ ದೇಹವು ವಿಶೇಷ ಶಕ್ತಿಯನ್ನು ಹೊಂದಿತ್ತು. ಈ ಶಕ್ತಿಯನ್ನು ಆತನು ಪುನರುತ್ಥಾನದ ಹಿಂದೆ ಬಳಸಲಿಲ್ಲ."[4] ಓದಾಹರಣೆಗಾಗಿ, "ಇದರ ಸಂಗಡ ವ್ಯಕ್ತಿಗಳೇ ಹಾಗೂ ಗುಂಪುಗಳ ನಡುವೆ ಆತನು ಅನೇಕ ದಿವಸಗಳ ಕಾಲದ ಅಂತರವನ್ನಿಟುಕೊಂಡು ಪ್ರತ್ಯಕ್ಷವಾಗುತ್ತಿದ್ದನು."[5]

ಆತನು ವಿವಿಧ ಸ್ಥಳಗಳಲ್ಲಿ ಪ್ರತ್ಯಕ್ಷನಾಗುವಾಗ ಆತನ ದೇಹದಲ್ಲಿ ವ್ಯತ್ಯಾಸಗಳಿದ್ದ ಸಂಗತಿಯನ್ನು ಗಮನಿಸಬಹುದಾಗಿದೆ. ಉದ್ದೇಶಗಳಿಗನುಗುಣವಾಗಿ ದೇಹವು ಬದಲಾಗಿರಬಹುದು.[6] ಮಾರ್ಕ 16:12ರಲ್ಲಿ, "ಅವರು ನಡಕೊಂಡು ಹೋಗುತ್ತಿರುವಾಗ ಆತನು ಅವರಿಗೆ ರೂಪಾಂತರದಿಂದ ಕಾಣಿಸಿಕೊಂಡನು." ಇತರೆ ತರ್ಜುಮೆಗಳಲ್ಲಿ "ವಿವಿಧ ರೂಪ" ಎಂದಿರುತ್ತದೆ (RSV) ನ್ನು ಸೆಂಚುರಿ ತರ್ಜುಮೆಯಲ್ಲಿ "ಹಿಂದೆ ಇದ್ದ ರೂಪದಲ್ಲಿ

ಆತನು ಇರಲಿಲ್ಲ ಎಂದಿದೆ." ಲಿವಿಂಗ್ ತರ್ಜುಮೆಯಲ್ಲಿ ಆದರೆ ಅವರು ಆತನ ಗುರುತನ್ನು ಹಿಡಿಯಲಿಲ್ಲ. ಅವರ ಕಣ್ಣು ಕಟ್ಟಿದ ಹಾಗಾಯಿತು (ಲೂಕ 24:16; ಯೋಹಾನ 20:14).

ಅಂತ್ಯದಲ್ಲಿ ಕಾರ್ಟರವರು, ಈ ಪ್ರಕಾರವಾಗಿ "ಆತನು ಸಾಮಾನ್ಯ ಸ್ತ್ರೀ ಪುರುಷರು ಹೊಂದಿದ್ದ ಲೌಕೀಕ ದೇಹದ ಗುಣಗಳನ್ನು ಹೊಂದಿರದೇ, ವಿಶೇಷ ಗುಣಗಳನ್ನು ಹೊಂದಿದ್ದನು. ಮರಣವಾಗುವ ಮೊದಲು, ಈ ಗುಣಗಳನ್ನು ಆತನ ದೇಹವು ಹೊಂದಿರಲಿಲ್ಲ."[7] ಎಂದು ನಿರ್ಣಯಿಸಿದ್ದಾರೆ. Robert Culver ರವರು ಪ್ರಕಾರ, "ಅವರ ದೇಹವು *ಎಸ್ಕಟಾಲಾಜಿಕಲ್*[8] ಆಗಿ ರೂಪಾಂತರ ಹೊಂದಿತು, ಅಂದರೆ ಮಹಿಮಾ ಶರೀರವಾಯಿತು."[9] Culver's ಅವರು ಫಿಲಿಪ್ಪಿ 3:21ರ ಹೇಳಿಕೆಯನ್ನು ನೀಡಿರಬಹುದು, ಅದು "ಮಹಿಮಾ ಶರೀರ"ವನ್ನು ಕುರಿತು ಹೇಳಿತು. "ಹೌದು ಪೌಲನು ತಿಳಿಸಿರುವ ಹೊಸ ಲಕ್ಷಣಗಳುಳ್ಳ ಮತ್ತು ಶಕ್ತಿಯುಳ್ಳ [ಯೇಸುವಿನ ಪುನರುತ್ಥಾನ ಹೊಂದಿದ ಶರೀರವು] ಆತ್ಮೀಕ ಶರೀರವಾಗಿದೆ (1 ಕೊರಿಂಥ 15:44)"[10] ಎಂಬುದು ಕಾರ್ಟರ್‌ವರ ಅಂತಿಮ ನಿರ್ಣಯವಾಗಿದೆ.

ಪುನರುತ್ಥಾನವಾದ ನಂತರ ನಾವುಗಳು ಹೊಂದಿರುವ ಆತ್ಮೀಕ ದೇಹಕ್ಕೂ ಹಾಗೂ ಯೇಸುವಿನ ಪುನರುತ್ಥಾನ ಹೊಂದಿರುವ ದೇಹದ ನಡುವೆ ಒಂದು ಹತ್ತಿರವಾದ ಸಂಬಂಧವಿರಬಹುದು. ಆತ್ಮೀಕ ದೇಹದ ಬಗ್ಗೆ ಪೌಲನು ನೀಡಿರುವ ಬೋಧನೆಯು ಒಂದು ಸಾರಾಂಶವನ್ನು ಇಲ್ಲಿ ನೀಡವಾಗಿದೆ: ನಾವು ಪುನರುತ್ಥಾನ ಹೊಂದಿದ ನಂತರ, ದೇಹವಿಲ್ಲದ ಆತ್ಮವಾಗಿರದೆ, ಮಹಿಮಾ ಶರೀರವನ್ನು ಹೊಂದಿರುತ್ತೇವೆ (ನೋಡಿರಿ 2 ಕೊರಿಂಥ 4:16-5:4).[11] ಪುನರುತ್ಥಾನ ಹೊಂದಿದ ದೇಹದ ಬಗ್ಗೆ ಪೌಲನು, 1 ಕೊರಿಂಥ 15ರಲ್ಲಿ ಬರೆದಿರುವನು (ನೋಡಿ ವಚನ 35). ಹೊಸದಾದ "ಆತ್ಮೀಕ" ದೇಹಕ್ಕೂ, ಹಳೆಯ "ಸ್ವಾಭಾವಿಕವಾದ" ದೇಹಕ್ಕೂ, ಒಂದು ಸಂಬಂಧ ಇದ್ದೇ ಇರುತ್ತದೆ (ವಚನಗಳು 38-41). ಬಿತ್ತುವ ಬೀಜದ ಕುರಿತು, ಪೌಲನು ಬರೆದು,

> ಸತ್ತವರಿಗಾಗುವ ಪುನರುತ್ಥಾನ ಅದೇ ಪ್ರಕಾರವಾಗಿರುವದು. ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದು ಬರುವದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಬಲಾವಸ್ಥೆಯಲ್ಲಿ ಎದ್ದುಬರುವದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮೀಕ ದೇಹವಾಗಿ ಎದ್ದು ಬರುವದು. ಪ್ರಾಕೃತದೇಹವಿರುವದಾದರೆ ಆತ್ಮಿಕ ದೇಹವೂ ಇರುವದು (ವಚನಗಳು 42-44).

ನಾವು ಬದುಕಿದ್ದರೂ, ಮರಣಹೊಂದಿದ್ದರೂ, ಕ್ರಿಸ್ತನು ಬರುವಾಗ "ನಾವು ಬದಲಾಗುತ್ತೇವೆ" (ವಚನಗಳು 51-54). ಆಗ ನಾವು *ನಮ್ಮ* ಪುನರುತ್ಥಾನವಾದ ದೇಹವನ್ನು ಪಡೆಯುತ್ತೇವೆ.

ಯೇಸುವಿನ ಪುನರುತ್ಥಾನ ಹೊಂದಿದ ದೇಹಕ್ಕೂ, ನಮ್ಮ ಆತ್ಮೀಕ ದೇಹದ ನಡುವೆ ಒಂದು ಸಮಾನಂತರವನ್ನು ಗ್ರಹಿಸಬಹುದಾಗಿದೆ - ಒಂದು ಸಹಜವಾಗಿರುವ ವ್ಯತ್ಯಾಸವನ್ನು ನೋಡಬಹುದು. ಯೇಸುವಿನ ಪುನರುತ್ಥಾನವಾದ ದೇಹವು "ಮಾಂಸ ಹಾಗೂ ಮೂಳೆಗಳನ್ನು ಹೊಂದಿತ್ತು" (ಲೂಕ 24:39), ಆದರೆ ಪೌಲನು, "ರಕ್ತ ಮಾಂಸವು" ದೇವರ ರಾಜ್ಯವನ್ನು (ಪರಲೋಕ ರಾಜ್ಯ) ಹೊಂದಲಾರದು ಎಂದು ಬರೆದಿರುವನು (1 ಕೊರಿಂಥ 15:50). "ದೇಹವನ್ನು" ಸೂಚಿಸಲು ಯೇಸು ಮಾಂಸ ಹಾಗೂ ಮೂಳೆ ಎಂದು ತಿಳಿಸಿರುವನು.[12] ಪುನರುತ್ಥಾನ ಹೊಂದಿದ ನಂತರದ ನಾಲ್ವತ್ತು ದಿವಸಗಳಲ್ಲಿ ಯೇಸು, ಮಹಿಮಾ ಶರೀರವನ್ನು ಬಳಸಿರಬಹುದು - ಶಿಷ್ಯರೊಂದಿಗೆ ಸಂಪರ್ಕಿಸುವ ಸಲುವಾಗಿ ಹಾಗೂ ತಾನು ಪರಲೋಕಕ್ಕೆ ಏರಬೇಕಾದ ವಿಚಾರವನ್ನು ತಿಳಿಸಲು ಯೇಸು ಈ ದೇಹವನ್ನು ಹೊಂದಿರಲೂ ಬಹುದು. ಆತನು ತಂದೆಯು ಬಳಿಗೆ ಏರಿಹೋದ ನಂತರ, ಮಹಿಮೆಯ ಪೂರ್ಣ ಶರೀರವನ್ನು

ಹೊಂದಿರಬಹುದು.[13]

ಈ ವಿವರಣೆಯ ನಂತರ, ಯೇಸುವಿನ ಪುನರುತ್ಥಾನ *ಹೊಂದಿದ* ದೇಹದ ಕುರಿತು ನಮ್ಮ ವಿವರಣೆಯೇನು? ಅದು ಸಹಜವಾದರೂ, *ಅಸಹಜ* ದೇಹವೇ ಆಗಿತ್ತು. ಆದರೆ ಆತನು ಪುನರುತ್ಥಾನ ಹೊಂದಿರುವದು ಸತ್ಯಾಂಶವೆಂಬುದನ್ನು ನಾವುಗಳು ನಂಬಿಕೆಯಿಂದ ಅರಿಯುತ್ತೇವೆ.

---

ಟಿಪ್ಪಣಿಗಳು

[1]ಯೇಸು ಈಗ ತಾನೇ ಬಾಗಿಲನ್ನು ತಟ್ಟಿದನು ಕೆಲವರು ಆತನಿಗೆ ಒಳಗಡೆ ಸೇರಿಸಿಕೊಂಡರು ಎಂದು ಕೆಲವರು ನಂಬುತ್ತಾರೆ. ಅಂಥಹ ಲೌಕಿಕವಾಗ ಪ್ರವೇಶವು ಕಠಿಣವಾದ ಪ್ರತಿಕ್ರಿಯೆಗಳನ್ನು ಉತ್ಪಾದಿಸುತ್ತದೆ ಎಂದು ಲೂಕ 24:36, 37ರಲ್ಲಿ ತಿಳಿಸಲಾಗಿದೆ. [2]Hailey's reference is to Walter Bauer, *A Greek-English Lexicon of the New Testament and Other Early Christian Literature,* 2d ed., rev. William F. Arndt and F. Wilbur Gingrich (Chicago: University of Chicago Press, 1957). [3]Homer Hailey, T*hat You May Believe: Studies in the Gospel of John* (Grand Rapids, Mich.: Baker Book House, 1973), 145. [4]John Franklin Carter, *A Layman's Harmony of the Gospels* (Nashville: Broadman Press, 1961), 341. [5]Ibid. [6]ಕೆಲವು ಸಾರಿ, ಆತನ ದೈವತ್ವವು ''ತೋರಿಸಿಕೊಂಡಿರಬಹುದು'' ಎಂಬ ವಿಧದಲ್ಲಿ ರೂಪಾಂತರಗೊಂಡಿದೆಯೇ? [7]Carter, 341. [8]"Eschatology" "ಮರಣ, ಸ್ವರ್ಗ, ನರಕಗಳ ಶಾಸ್ತ್ರ" (*logos*) ಇದು "ಅಂತ್ಯದ ವಿಷಯಗಳ ಕುರಿತು ಮಾಡುವ ಅಭ್ಯಾಸ" (*eschatos*) (ಅದು ಈ ಲೋಕದ ಅಂತ್ಯ, ನ್ಯಾಯತೀರ್ಪು ಸ್ವರ್ಗ ಮತ್ತು ನರಕ ಮುಂದೆ ಇದೆ ಇದರ ಕುರಿತು ಅಭ್ಯಾಸ). ಈ ಶಬ್ದದ ಅಂತ್ಯದಲ್ಲಿ ''eschatological'' ಅರ್ಥವು ''ಸಂಬಂಧವಾಗಿರುವುದಕ್ಕೆ'' ಎಂಬುದಾಗಿದೆ (eschatological) ಅಂತ್ಯದಲ್ಲಿ ಈ ದೇಹವು ಒಂದು ರೀತಿಯ ದೇಹವನ್ನು ಕ್ರಿಸ್ತನು ಬರುವಾಗ "ಅಂತ್ಯದಲ್ಲಿ" ಹೊಂದುವದು. [9]Robert Duncan Culver, *The Life of Christ* (Grand Rapids, Mich.: Baker Book House, 1976), 267. [10]Carter, 341. [11]ನನಗೆ ಆತ್ಮ ಮತ್ತು ಆತ್ಮೀಕ ದೇಹದ ಮಧ್ಯ ಇರುವ ವ್ಯತ್ಯಾಸ ಗೊತ್ತಿರುವುದಿಲ್ಲ, ಆದರೆ ಅಂತ್ಯದಲ್ಲಿ ನಮ್ಮ ಆತ್ಮಗಳು ಸಂಪೂರ್ಣ ಕಾರ್ಯ ಮಾಡುವ ದೇಹವನ್ನು ''ಧರಿಸಿಕೊಳ್ಳುವದು'' ಅವಶ್ಯವಾಗಿದೆ ಮತ್ತು ಅವರ ನಿತ್ಯತ್ವದ ಅದೃಷ್ಟ ಪರಿಪೂರ್ಣ ಮಾಡಲು ಅದನ್ನು ಮಾಡಬೇಕಾಗುತ್ತದೆ. [12]The Living Bible ಭಾವಾರ್ಥವು ಲೂಕ 24:39ರ ಅನುವಾದ ಹೀಗೆ ಹೇಳುತ್ತದೆ, "... ನನ್ನನ್ನು ಮುಟ್ಟಿರಿ ಮತ್ತು ನಾನು ಭೂತವಲ್ಲವೆಂದು ಖಚಿತ ಪಡಿಸಿಕೊಳ್ಳಿರಿ! ಭೂತಗಳಿಗೆ ನೀವು ನನಗೆ ನೋಡುವ ಇಂಥಹ ದೇಹ ಭೂತಗಳಿಗೆ ಇರುವುದಿಲ್ಲ!" [13]ಆರೋಹಣದ ಕುರಿತು ಹೆಚ್ಚಿನ ವಿಷಯಕ್ಕಾಗಿ, "ಅಭಿನಂದನೆ - ಮತ್ತು ಶುಭಾಷಯ" ಮತ್ತು "ಮಹಿಮೆಯಲ್ಲಿ ತೆಗೆದುಕೊಂಡದ್ದು'' ಎನ್ನುವದನ್ನು ನೋಡಿರಿ ಈ ಪುಸ್ತಕದ ಮುಂಚೆ ನೀವು ಕಂಡುಕೊಳ್ಳುವಿರಿ.